ಅನುದಾನದ ವಿವರ

213 ಶ್ರೀ ಶ್ರೀನಿವಾಸ ಎಂ.

ಸಿ.ಎಂ. ಉದಾಸಿ ಮಾನ್ಯ ಲೋಕೋಪಯೋಗಿ ಸಚಿವರು

ಅ) ಲೋಕೋಪಯೋಗಿ ಇಲಾಖೆಯಿಂದ ಕೇಂದ್ರ ರಸ್ತೆ ನಿದಿ (ಸಿ.ಆರ್.ಎಫ್) ಅಡಿಯಲ್ಲಿ 2008–09 ಸಾಲಿನಲ್ಲಿ ಮಂಜೂರಾದ ಹಣವೆಷ್ಟು (ತಾಲೂಕುವಾರು, ಜಿಲ್ಲಾವಾರು ಹಂಚಿಕೆ ಮಾಡಲಾದ ಅನುದಾನದ ವಿವರಗಳು ಹಾಗೂ ಕಾಮಗಾರಿಗಳ ಪಟ್ಟಿಯನ್ನು ಒದಗಿಸುವುದು)?

ಕೇಂದ್ರ ಸರ್ಕಾರದಿಂದ ಕೇಂದ್ರ ರಸ್ತೆ ನಿದಿ ಯೋಜನೆಯಡಿ 2008–09ನೇ ಸಾಲಿಗೆ 354 ಕಾಮಗಾರಿಗಳು ರೂ.553.50 ಕೋಟಿ ಮೊತ್ತಕ್ಕೆ ಮಂಜೂರಾಗಿರುತ್ತವೆ. ಕೇಂದ್ರ ಸರ್ಕಾರದ ಮಾರ್ಗ ಸೂಚಿಗಳನ್ವಯ ಹಂಚಿಕೆ ಮಾಡಲಾಗುತ್ತದೆ. ತಾಲ್ಲೂಕು ಜಿಲ್ಲಾವಾರು ಹಂಚಿಕೆ ಉದ್ಭವಿಸುವುದಿಲ್ಲ.

ಆ) ಲೋಕೋಪಯೋಗಿ ಇಲಾಖೆಯಿಂದ ಕೇಂದ್ರ ರಸ್ತೆ ನಿದಿ (ಸಿ.ಆರ್.ಎಫ್) ಅಡಿಯಲ್ಲಿ 2008–09ನೇ ಸಾಲಿನಲ್ಲಿ ಅನುದಾನ ವಂಚಿತ ತಾಲೂಕು ಮತ್ತು ಜಿಲ್ಲೆಗಳು ಯಾವುವು (ವಿವರಗಳನ್ನು ಒದಗಿಸುವುದು)?

ಕೇಂದ್ರ ರಸ್ತೆನಿದಿ ಯೋಜನೆಯ ಮಾರ್ಗಸೂಚಿಗಳನ್ವಯ ಅಗತ್ಯತೆಗೆ ಅನುಸಾರವಾಗಿ ಕಾಮಗಾರಿಗಳನ್ನು ಮಂಜೂರು ಮಾಡಲಾಗುತ್ತದೆ. ಆದರೆ ಜಿಲ್ಲಾವಾರು ಮತ್ತು ತಾಲ್ಲೂಕುವಾರು ಹಂಚಿಕೆಗೆ ಅವಕಾಶವಿರುವುದಿಲ್ಲ. ಆದುದರಿಂದ ವಿವರಗಳನ್ನು ಒದಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ಯೋಜನೆಯಡಿಯಲ್ಲಿ ಅನುದಾನ ಹಂಚಿಕೆ ಮಾಡಲು ಅನುಸರಿಸಬೇಕಾದ ಮಾನದಂಡಗಳೇನು?

ಕೇಂದ್ರ ಸರ್ಕಾರದ ಸುತ್ತೋಲೆಯಲ್ಲಿಯ ಮಾನದಂಡಗಳು ಈ ಕೆಳಗಿನಂತಿವೆ.

1. ರಾಜ್ಯ ಹೆದ್ದಾರಿ, ಜಿಲ್ಲಾ ಮುಖ್ಯ ರಸ್ತೆಗಳು (ಗ್ರಾಮೀಣ ರಸ್ತೆ ಹೊರತುಪಡಿಸಿ)
2. ಸೇತುವೆಗಳ ಪುನರುಜ್ಜೀವನ, ಕ್ರಾಸ್ ಡ್ರೈನೇಜ್, ಬಲಹೀನ ರಸ್ತೆಗಳ ಬಲಪಡಿಸುವಿಕೆ, ಬೈಪಾಸ್ ನಿರ್ಮಾಣ, ಸರ್ವೀಸ್, ರಸ್ತೆ, ರಾಷ್ಟ್ರೀಯ ಹೆದ್ದಾರಿಗಳಿಗೆ ಹಾಗೂ ಪ್ರವಾಸಿ ತಾಣಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳು.
3. ಸಾಕಷ್ಟು ಉದ್ದವಿರುವ ಕನಿಷ್ಟ ಪಕ್ಷ 10.00 ಕಿಮೀ. ಉದ್ದವಿರುವ ರಸ್ತೆಗಳು, ಉದ್ದ ಕಡಿಮೆ ಇದ್ದಲ್ಲಿ ಸ್ಪಷ್ಟವಾದ ಸಮಂಜಸ ಕಾರಣಗಳನ್ನು ನೀಡಬೇಕು. ಇಂತಹ ಪ್ರಸ್ತಾವನೆಗಳನ್ನು ಅನುದಾನದ ಲಭ್ಯತೆ ಮೇರೆಗೆ ಕೇಂದ್ರ ಸರ್ಕಾರಕ್ಕೆ ನಿಗದಿತ ನಮೂನೆಯಲ್ಲಿ ಪಟ್ಟಿ

ಸಲ್ಲಿಸಲಾಗುವುದು. ಕೇಂದ್ರ ಸರ್ಕಾರದ ಅನುಮೋದನೆ ದೊರೆತ ನಂತರ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

ಈ) ವಿಧಿ ವಿಧಾನಗಲು ಉಲ್ಲಂಘನೆಯಾಗಿದ್ದಲ್ಲಿ ಇದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸಲಾಗಿದೆಯೇ (ಮಾಹಿತಿ ಒದಗಿಸುವುದು)?

ವಿದಿ ವಿಧಾನಗಳನ್ನು ಉಲ್ಲಂಘಿಸಲಾಗಿರುವುದಿಲ್ಲ.

ವಿಷಯ:ಹೊಯ್ಸಳರ ಕಾಲದ ದೇವಾಲಯಗಳನ್ನು ಪ್ರವಾಸೋದ್ಯಮ ಇಲಾಖೆಯ ವ್ಯಾಪ್ತಿಗೆ ಸೇರಿಸುವುದು.

214 ಶ್ರೀ ಶ್ರೀನಿವಾಸ್ ಎಂ.

ಜಿ.ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು)

ಅ) ಮಂಡ್ಯ ತಾಲ್ಲೂಕು ಹೊಸಬೂದನೂರು ಮತ್ತು ಬಸರಾಳು ಗ್ರಾಮಗಳಲ್ಲಿ ಹೊಯ್ಸಳರ ಕಾಲದ ಪುರಾತನ ದೇವಾಲಯಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು.

ಆ) ಹಾಗಿದ್ದಲ್ಲಿ, ಈ ದೇವಸ್ಥಾನಗಳನ್ನು ಪ್ರವಾಸೋದ್ಯಮ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಂಡು ಅಭಿವೃದ್ಧಿಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ;

ಹೊಸಬೂದಿನೂರಿನಲ್ಲಿ ಶ್ರೀ ವೇಣುಗೋಪಾಲ ಸ್ವಾಮಿ ದೇವಸ್ತಾನ ಹಾಗೂ ಬಸರಾಳುನಲ್ಲಿರುವ ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನಗಳು ಹೊಯ್ಸಳ ವಾಸ್ತುಶಿಲ್ಪ ಉಳ್ಳ ದೇವಾಲಯಗಳಾಗಿರುತ್ತವೆ.

ಈ ದೇವಾಲಯಗಳು ಕೇಂದ್ರ ಪುರಾತತ್ವ ಮತ್ತು ಸಂರಕ್ಷಣಾ ಇಲಾಖೆ ಅಧೀನದಲ್ಲಿದ್ದು ಇದನ್ನು ರಾಷ್ಟ್ರೀಯ ಸ್ಮಾರಕಗಳೆಂದು ಗುರುತಿಸಲಾಗಿದೆ. ಇವನ್ನು ಪ್ರವಾಸೋದ್ಯಮ ಇಲಾಖೆಗೆ ವಹಿಸುವ ಪ್ರಸ್ತಾಪ ಇರುವುದಿಲ್ಲ.

ಹೊಸಬುದನೂರಿನಲ್ಲಿರುವ ಶ್ರೀಅನಂತಪದ್ಮನಾಭಸ್ವಾಮಿ ದೇವಾಲಯ ಹಾಗೂ ಕಾಶಿವಿಶ್ವೇಶ್ವರ ದೇವಾಲಯಗಳು ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಇಲಾಖೆಯ ರಕ್ಷಣಾ ವ್ಯಾಪ್ತಿಯಲ್ಲಿ ಬರುವುದರಿಂದ ಇವುಗಳ ಸಂರಕ್ಷಣಾ: ಅಭಿವೃದ್ಧಿ ಕಾರ್ಯಗಳನ್ನು ಈಗಾಗಲೇ ಕೈಗೊಳ್ಳಲಾಗಿದೆ.

ಇ) ಹಾಗಿದ್ದಲ್ಲಿ, ಎಂದಿನಿಂದ ಈ ದೇವಸ್ಥಾನಗಳನ್ನು ಪ್ರವಾಸೋದ್ಯಮ ಇಲಾಖೆಗೆ ತೆಗೆದುಕೊಳ್ಳಲಾಗುವುದು;

ಈ ದೇವಾಲಯಗಳನ್ನು ಪ್ರವಾಸೋದ್ಯಮ ಇಲಾಖೆಗೆ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.